ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟದೆ)
ಕಾ ಮತ್ತು ಪಾ ಉಪವಿಭಾಗ,
ಚಾವಿಸನಿನಿ,ಬೇಲೂರು -573115
ದೂರವಾಣಿ: 08173-245224

CHAMUNDESHWARI ELECTRICITY SUPPLY CORPORATION LIMITED
(A Govt. of Karnataka undertaking)
O & M SubDivision,
CESC, Belur-573115.
Website: WWW.CESCMYSORE.ORG
E-Mail: aeehsnbselur@rediffmail.com
Company Identity Number [CIN]:- U40109KA2004SGC035177

ಕ್ರಮಾಂಕ : ಸ.ಕಾ.ಇಂ(ವಿ)/ಸ.ಇಂ(ತಾಂ)/ಬೇ/2021-22/ 3993, 94. ದಿನಾಂಕ : 24.9.202
ಲಗತ್ತು:-

## ಜನಸಂಪರ್ಕ ಸಭೆಯ ನಡವಳಿಗಳು

ದಿನಾಂಕ : 22.9.2021 ಬುಧುವಾರದಂದು ಶ್ರೀಮತಿ ಭಾರತಿ ಕೆ.ಎಸ್ ಕಾರ್ಯಪಾಲಕ ಇಂಜಿನಿಯರ್(ವಿ), ಸಕಲೇಶಪುರ ರವರ ಅಧ್ಯಕ್ಷತೆಯಲ್ಲಿ ಬೇಲೂರು ಉಪವಿಭಾಗ ಕಛೇರಿಯಲ್ಲಿ ನಡೆಸಿದ ಗ್ರಾಹಕರ ಕುಂದು ಕೊರತೆ ಸಭೆಯ ನಡವಳಿಗಳು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ವಿವರ ;**

1. ಶ್ರೀ ರಂಗೇಗೌಡ ಎಂ.ಬಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ), ಬೇಲೂರು ಉಪವಿಭಾಗ.
2. ಶ್ರೀ ನಿಕೇಶ ಕುಮಾರ್ ಸಿ.ಎನ್. ಸಹಾಯಕ ಇಂಜಿನಿಯರ್(ತಾ), ಬೇಲೂರು ಉಪವಿಭಾಗ.
3. ಶ್ರೀ ಕೃಷ್ಣ ಕಿರಿಯ ಇಂಜಿನಿಯರ್(ವಿ), ಹಗರೆ ಶಾಖೆ.
4. ಶ್ರೀ ಸಂತೋಷ ಎಂ ಕಿರಿಯ ಇಂಜಿನಿಯರ್(ವಿ), ತೊಳಲು ಶಾಖೆ.
5. ಶ್ರೀ ಸಂತೋಷ್ ಕುಮಾರ್ ಡಿ ಕಿರಿಯ ಇಂಜಿನಿಯರ್(ವಿ), ಹಳೇಬೀಡು ಶಾಖೆ.
6. ಶ್ರೀ ಎನ್ ಡಿ ಕುಮಾರ್ ಸಹಾಯಕ ಇಂಜಿನಿಯರ್(ವಿ), ಬೇಲೂರು ಶಾಖೆ.

**ಶ್ರೀಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರುಗಳನ್ನು ಸ್ವಾಗತಿಸುವ ಮೂಲಕ ಸಭೆಯನ್ನು ಮಧ್ಯಾಹ್ನ 11 : 00 ಗಂಟೆಗೆ ಪ್ರಾರಂಭ ಮಾಡಿದರು.**

---

**ಗ್ರಾಹಕರ ಕುಂದು ಕೊರತೆ ಸಭೆಯಲ್ಲಿ ದಾಖಲಾದ ದೂರಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ ;**

1. ಶ್ರೀಮತಿ ಯಶೋಧಮ್ಮ ಸಂಶೆಟ್ಟಿಹಳ್ಳಿ ಗ್ರಾಮದವರು ಸಂಶೆಟ್ಟಿಹಳ್ಳಿಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಾಂಪೌಂಡ್ ಮುಂದೆ ಇರುವ ವಿದ್ಯುತ್ ಕಂಬ ಮತ್ತು ಮಾರ್ಗವನ್ನು ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸಬೇಕೆಂದು ಸಭೆಯಲ್ಲಿ ಕೋರಿದರು.

ಇದಕ್ಕೆ ಸಂಬಂಧಿಸಿದಂತೆ ಸಭೆಯ ಅಧ್ಯಕ್ಷರು ಬೇಲೂರು ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ತುರ್ತಾಗಿ ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸಲು ಸೂಕ್ತ ಕ್ರಮವಹಿಸಬೇಕೆಂದು ಸಭೆಯಲ್ಲಿ ತಿಳಿಸಿದರು. ಹಾಗೂ ಇತರೆ ಶಾಲೆಗಳ ಆವರಣಗಳಲ್ಲಿ ಹಾದು ಹೋಗಿರುವ ವಿದ್ಯುತ್ ಮಾರ್ಗಗಳನ್ನು ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸಲು ಕ್ರಮ ವಹಿಸಬೇಕೆಂದು ಸಭೆಯಲ್ಲಿ ಎಲ್ಲಾ ಶಾಖಾಧಿಕಾರಿಗಳಿಗೆ ತಿಳಿಸಲಾಯಿತು.

2. ಶ್ರೀ ಬಿ ಕೆ ರತ್ನಾಕರ ಬೇಲೂರು ಗ್ರಾಮದವರು ನಮ್ಮ ಸ್ಥಾವರ ಸಂಖ್ಯೆ ಎಇಹೆಚ್960 ಮೀಟರ್ ಹಾಳಾಗಿದ್ದು ಅಧಿಕ ಬಿಲ್ಲು ಬರುತ್ತಿರುತ್ತದೆಂದು, ಸಭೆಯಲ್ಲಿ ತಿಳಿಸಿ ಮಾಪಕವನ್ನು ಪರಿಶೀಲಿಸುವಂತೆ ಕೋರಿದರು.

ಇದಕ್ಕೆ ಸಂಬಂಧಿಸಿದಂತೆ ಸಭೆಯ ಅಧ್ಯಕ್ಷರು ಬೇಲೂರು ಶಾಖಾಧಿಕಾರಿಗಳಿಗೆ ಸದರಿ ಸ್ಥಾವರದ ಮಾಪಕವನ್ನು ಎಲ್‌ಟಿ ರೇಟಿಂಗ್ ರವರಿಂದ ಪರಿಶೀಲಿಸಿ, ಹಾಳಾಗಿದ್ದರೆ ಮಾಪಕವನ್ನು ಬದಲಾಯಿಸಲು ಸೂಕ್ತ ಕ್ರಮವಹಿಸಲು ತಿಳಿಸಲಾಯಿತು.

3. ಶ್ರೀ ಮೊಗಣ್ಣಗೌಡ ಗಬ್ಬಲಗೋಡು ಗ್ರಾಮದವರು ತಮ್ಮ ಮನೆಯ ಹತ್ತಿರ ಇರುವ ವಿದ್ಯುತ್ ಕಂಬ ಮತ್ತು ಮಾರ್ಗವನ್ನು ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸಬೇಕೆಂದು ಸಭೆಯಲ್ಲಿ ಕೋರಿದರು.

ಇದಕ್ಕೆ ಸಂಬಂಧಿಸಿದಂತೆ ಸಭೆಯ ಅಧ್ಯಕ್ಷರು ತೊಳಲು ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ತುರ್ತಾಗಿ ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸಲು ಸೂಕ್ತ ಕ್ರಮವಹಿಸಬೇಕೆಂದು ಸಭೆಯಲ್ಲಿ ತಿಳಿಸಿದರು. ಹಾಗೂ ಗ್ರಾಹಕರಿಗೆ ಸ್ವಯಂ ಕಾರ್ಯ ಯೋಜನೆಯಡಿಯಲ್ಲಿ ಕಾಮಗಾರಿ ನಿರ್ವಹಿಸಿಕೊಳ್ಳಬೇಕೆಂದು ಸಭೆಯ ಅಧ್ಯಕ್ಷರು ಗ್ರಾಹಕರಿಗೆ ತಿಳಿಸಿದರು.

4. ಶಿವೇಗೌಡ ಮತ್ತು ಲಕ್ಷ್ಮೀಪುರ ಗ್ರಾಮಸ್ಥರುಗಳು ತಮ್ಮ ಗ್ರಾಮಕ್ಕೆ ಸಮರ್ಪಕವಾಗಿ ವಿದ್ಯುತ್ ಸರಬರಾಜು ಮಾಡುತ್ತಿರುವುದಿಲ್ಲವೆಂದು ಸಭೆಯಲ್ಲಿ ಕೋರಿದರು.

ಇದಕ್ಕೆ ಸಂಬಂಧಿಸಿದಂತೆ ಸಭೆಯ ಅಧ್ಯಕ್ಷರು ತೊಳಲು ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ವಿದ್ಯುತ್ ಸರಬರಾಜನ್ನು ಲಕ್ಷ್ಮೀಪುರ ಗ್ರಾಮಕ್ಕೆ ಸಮರ್ಪಕವಾಗಿ ನೀಡಲು ಸೂಕ್ತ ಕ್ರಮಕೈಗೊಂಡು ಹಾಗೂ ಅವಶ್ಯಕತೆ ಇದ್ದಲ್ಲಿ ಲಿಂಕ್‌ಲೈನ್ ಅಂದಾಜು ಪಟ್ಟಿಯನ್ನು ತಯಾರಿಸುವಂತೆ ಸಭೆಯಲ್ಲಿ ಶಾಖಾಧಿಕಾರಿಯವರಿಗೆ ತಿಳಿಸಲಾಯಿತು.

**ಶ್ರೀಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರುಗಳನ್ನು ವಂದಿಸುವ ಮೂಲಕ ಸಭೆಯನ್ನು ಸಂಜೆ 2 : 00 ಕ್ಕೆ ಮುಕ್ತಾಯಗೊಳಿಸಲಾಯಿತು.**

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಕಾ ಮತ್ತು ಪಾ ಉಪ-ವಿಭಾಗ, ಸೆಸ್ಕ್, ಬೇಲೂರು.

*ಯಥಾ ಪ್ರತಿಗಳನ್ನು ;*

1. ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಹಾಸನ ರವರ ಆದ್ಯ ಗಮನಕ್ಕೆ ಸಲ್ಲಿಸಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ., ಸಕಲೇಶಪುರ ರವರ ಆದ್ಯ ಗಮನಕ್ಕೆ ಸಲ್ಲಿಸಿದೆ.